3. ಪ್ರಕಟಣೆ

ವಿಷಯ: ಕರ್ನಾಟಕ ಜನತಾ ಪಕ್ಷವನ್ನು ಭಾರತೀಯ ಜನತಾ ಪಕ್ಷದೊಂದಿಗೆ ವಿಲೀನಗೊಳಿಸಲು ನಿರ್ಧರಿಸುವ ಬಗ್ಗೆ.

ಕರ್ನಾಟಕ ಜನತಾ ಪಕ್ಷದ ಶಾಸಕಾಂಗ ಪಕ್ಷದ ನಾಯಕರಾದ ಶ್ರೀ ಬಿ.ಎಸ್. ಯಡಿಯೂರಪ್ಪ ರವರು ದಿನಾಂಕ:03.01.2014 ರಂದು ವಿಧಾನಸಭೆ ಸದಸ್ಯರುಗಳಾದ ಶ್ರೀ ಯು.ಬಿ. ಬಣಕಾರ್ ಶಾಸಕರು, ಡಾ॥ ಗುರುಪಾದಪ್ಪ ನಾಗಮಾರಪಳ್ಳಿ, ಡಾ॥ ವಿಶ್ವನಾಥ್ ಈ ಪಾಟೀಲ್ ಅವರುಗಳೊಂದಿಗೆ ಆಗಮಿಸಿ ಪತ್ರವನ್ನು ನೀಡಿ, ಕರ್ನಾಟಕ ಜನತಾ ಪಕ್ಷದ ಶಾಸಕಾಂಗ ಸಭೆಯಲ್ಲಿ ನಡೆದ ನಡವಳಿಗಳು ಮತ್ತು ಠರಾವನ್ನು ಲಗತ್ತಿಸಿ ಕರ್ನಾಟಕ ಜನತಾ ಪಕ್ಷವನ್ನು ರಾಷ್ಟ್ರೀಯ ಪಕ್ಷವಾದ ಭಾರತೀಯ ಜನತಾ ಪಕ್ಷದೊಂದಿಗೆ ವಿಲೀನಗೊಳಿಸಲು ನಿರ್ಧರಿಸಲಾಗಿದೆಯೆಂದು ತಿಳಿಸಿರುತ್ತಾರೆ. ಆ ನಿರ್ಣಯಕ್ಕೆ ಕಾರ್ಯಕಾರಿಣಿ ಸಭೆಯ ಸದಸ್ಯರಲ್ಲದೆ 14ನೇ ವಿಧಾನಸಭೆಯ ಅಂದರೆ ಪ್ರಸ್ತುತ ವಿಧಾನಸಭೆಗೆ ಕರ್ನಾಟಕ ಜನತಾ ಪಕ್ಷದಿಂದ ಆಯ್ಕೆಯಾಗಿರುವ 06 ಸದಸ್ಯರ ಪೈಕಿ 04 ಸದಸ್ಯರು ಅಂದರೆ ಶ್ರೀ ಬಿ.ಎಸ್. ಯಡಿಯುರಪ್ಪ, ಶಾಸಕರು (ಶಿಕಾರಿಪುರ ಕ್ಷೇತ್ರ ಸಂಖ್ಯೆ 115) ಶ್ರೀ ಯು.ಬಿ. ಬಣಕಾರ್ ಶಾಸಕರು (ಹಿರೇಕೆರೂರ ಕ್ಷೇತ್ರ, ಸಂಖ್ಯೆ 86) ಡಾ॥ ಗುರಪಾದಪ್ಪ ನಾಗಮಾರಪಳ್ಳಿ (ಬೀದರ್ ನಗರ ಕ್ಷೇತ್ರ, ಸಂಖ್ಯೆ 50) ಮತ್ತು ಡಾ॥ ವಿಶ್ವನಾಥ್ ಈ ಪಾಟೀಲ್ (ಬೈಲಹೊಂಗಲ ಕ್ಷೇತ್ರ, ಸಂಖ್ಯೆ:16) ಇವರುಗಳು ಹಾಜರಿದ್ದು, ನಿರ್ಣಯಕ್ಕೆ ಸಹಿ ಮಾಡಿರುತ್ತಾರೆ.

ತದನಂತರ ದಿನಾಂಕ:10.01.2014ರಂದು ಕರ್ನಾಟಕ ಜನತಾ ಶಾಸಕಾಂಗ ಪಕ್ಷದ ನಾಯಕರಾದ ಶ್ರೀ ಬಿ.ಎಸ್. ಯಡಿಯೂರಪ್ಪ ರವರು ಪತ್ರವನ್ನು ನೀಡಿ ಶಾಸಕಾಂಗ ಸಭೆಯ ಬಗ್ಗೆ ಕರ್ನಾಟಕ ಜನತಾ ಪಕ್ಷದ ಶಾಸಕಾಂಗ ಪಕ್ಷದ ಸದಸ್ಯರಿಗೆ ದಿನಾಂಕ:30.12.2013 ರಂದು ಲಿಖಿತ ಸೂಚನೆ ನೀಡಿದ್ದು, ಸದರಿ ದಾಖಲೆ ಪ್ರತಿ ನೀಡಿರುತ್ತಾರೆ ಅಲ್ಲದೆ ಕರ್ನಾಟಕ ಜನತಾ ಪಕ್ಷದ ಶಾಸಕರುಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ, ಶಾಸಕರು (ಶಿಕಾರಿಪುರ ಕ್ಷೇತ್ರ ಸಂಖ್ಯೆ 115) ಶ್ರೀ ಯು.ಬಿ. ಬಣಕಾರ್ ಶಾಸಕರು

(ಹಿರೇಕೆರೂರ ಕ್ಷೇತ್ರ, ಸಂಖ್ಯೆ 86) ಡಾ॥ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್ ನಗರ ಕ್ಷೇತ್ರ, ಸಂಖ್ಯೆ 50) ಮತ್ತು ಡಾ॥ ವಿಶ್ವನಾಥ್ ಈ ಪಾಟೀಲ್ (ಬೈಲಹೊಂಗಲ ಕ್ಷೇತ್ರ, ಸಂಖ್ಯೆ:16) ಇವರುಗಳು ಪ್ರತ್ಯೇಕವಾಗಿ ಪತ್ರವನ್ನು ನೀಡಿ ಕರ್ನಾಟಕ ಜನತಾ ಪಕ್ಷವು ರಾಷ್ಟ್ರೀಯ ಪಕ್ಷವಾದ ಭಾರತೀಯ ಜನತಾ ಪಕ್ಷದೊಂದಿಗೆ ವಿಲೀನಗೊಂಡ ಹಿನ್ನೆಲೆಯಲ್ಲಿ ಅವರುಗಳು ಭಾರತೀಯ ಜನತಾ ಪಕ್ಷದ ಶಾಸಕಾಂಗ ಪಕ್ಷದ ಸದಸ್ಯರಾಗಿರುತ್ತಾರೆಂದು ತಿಳಿಸಿರುತ್ತಾರೆ.

ದಿನಾಂಕ:04.01.2014 ರಂದು ಭಾರತೀಯ ಜನತಾ ಪಕ್ಷದ ರಾಜ್ಯಾಧ್ಯಕ್ಷರಾದ ಶ್ರೀ ಪ್ರಹ್ಲಾದ ಜೋಶಿ ರವರು ಪತ್ರವನ್ನು ನೀಡಿ, ದಿನಾಂಕ:27.12.2013 ರಂದು ನಡೆದ ತಮ್ಮ ಪಕ್ಷದ ಕಾರ್ಯಕಾರಿಣಿ ಸಭೆಯಲ್ಲಿ ಕರ್ನಾಟಕ ಜನತಾ ಪಕ್ಷವನ್ನು ಭಾರತೀಯ ಜನತಾ ಪಕ್ಷದೊಂದಿಗೆ ವಿಲೀನಗೊಳಿಸುವ ನಿರ್ಣಯವನ್ನು ಅಂಗೀಕರಿಸಲಾಗಿದೆ ಮತ್ತು ಕರ್ನಾಟಕ ಜನತಾ ಪಕ್ಷದ ಶಾಸಕಾಂಗ ಪಕ್ಷದ ಸಭೆಯಲ್ಲಿ ತೆಗೆದುಕೊಂಡ ವಿಲೀನದ ನಿರ್ಧಾರದ ಆಧಾರದ ಮೇಲೆ ಭಾರತೀಯ ಜನತಾ ಪಾರ್ಟಿಯು ಕರ್ನಾಟಕ ಜನತಾ ಪಕ್ಷದ ವಿಲೀನಕ್ಕೆ ಸಮ್ಮತಿಸಿದೆ ಎಂದು ತಿಳಿಸಿ ಮುಂದಿನ ಕ್ರಮಕ್ಕೆಗೊಳ್ಳಲು ಕೋರಿರುತ್ತಾರೆ.

ದಿನಾಂಕ: 04.01.2014 ರಂದು ಭಾರತೀಯ ಜನತಾ ಪಕ್ಷದ ಶಾಸಕಾಂಗ ಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್ ರವರು ಪತ್ರವನ್ನು ಬರೆದಿದ್ದು ಅದರಲ್ಲಿ ಕರ್ನಾಟಕ ಜನತಾ ಪಕ್ಷದ ಶಾಸಕಾಂಗ ಪಕ್ಷವು ದಿನಾಂಕ: 03.01.2014 ರಂದು ಸರ್ವಾನುಮತದಿಂದ ಕರ್ನಾಟಕ ಜನತಾ ಪಕ್ಷವನ್ನು ಭಾರತೀಯ ಜನತಾ ಪಕ್ಷದೊಂದಿಗೆ ವಿಲೀನಗೊಳಿಸುವ ಬಗ್ಗೆ ನಿರ್ಣಯ ತೆಗೆದುಕೊಂಡಿರುತ್ತಾರೆ, ಭಾರತೀಯ ಜನತಾ ಪಕ್ಷವು ಕರ್ನಾಟಕ ಜನತಾ ಪಕ್ಷವನ್ನು ವಿಲೀನಗೊಳಿಸಲು ಸಮ್ಮತಿಸಿದೆ ಎಂದು ತಿಳಿಸಿ, ಕರ್ನಾಟಕ ಜನತಾ ಪಕ್ಷದ ಸದಸ್ಯರನ್ನು ಭಾರತೀಯ ಜನತಾ ಪಕ್ಷದ ಸದಸ್ಯರನ್ನಾಗಿ ಪರಿಗಣಿಸಿ ವಿಲೀನಕ್ಕೆ ಮಾನ್ಯತೆ ನೀಡಿ ವಿಧಾನಸಭೆಯಲ್ಲಿ ಒಟ್ಟಿಗೆ ಆಸನ ವ್ಯವಸ್ಥೆಯನ್ನು ಕಲ್ಪಿಸಿ, ಅಧಿಕೃತ ವಿರೋಧ ಪಕ್ಷದ ಮಾನ್ಯತೆಯನ್ನು ಭಾರತೀಯ ಜನತಾ ಪಕ್ಷಕ್ಕೆ ನೀಡಬೇಕೆಂದು ಕೋರಿರುತ್ತಾರೆ. ಹಾಗೂ

ದಿನಾಂಕ:09.01.2014 ರ ಮತ್ತು 20.01.2014 ರ ಪತ್ರಗಳಲ್ಲಿ ಭಾರತೀಯ ಜನತಾ ಶಾಸಕಾಂಗ ಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್ ರವರು ಕರ್ನಾಟಕ ಜನತಾ ಪಕ್ಷದ ಶಾಸಕಾಂಗ ಪಕ್ಷದ ಸಭೆಯು ದಿನಾಂಕ:03.01.2014 ರಂದು ಸರ್ವಾನುಮತದಿಂದ ಕರ್ನಾಟಕ ಜನತಾ ಪಕ್ಷವನ್ನು ಭಾರತೀಯ ಜನತಾ ಪಾರ್ಟಿಯಲ್ಲಿ ವಿಲೀನಗೊಳಿಸುವ ನಿರ್ಣಯದಂತೆ ಕರ್ನಾಟಕ ಜನತಾ ಪಕ್ಷವನ್ನು ವಿಲೀನಗೊಳಿಸಲಾಗಿದೆ. ಅದರಂತೆ ಕರ್ನಾಟಕ ಜನತಾ ಶಾಸಕಾಂಗ ಪಕ್ಷದ ಸದಸ್ಯರುಗಳಾದ ಶ್ರೀಯುತರುಗಳಾದ (1) ಬಿ.ಎಸ್. ಯಡಿಯೂರಪ್ಪ (2) ಯು.ಬಿ. ಬಣಕಾರ್ (3) ಡಾ॥ ಗುರುಪಾದಪ್ಪ ನಾಗಮಾರಪಳ್ಳಿ ಹಾಗೂ ಡಾ॥ ವಿಶ್ವನಾಥ ಈ ಪಾಟೀಲ್, ಅವರುಗಳು ಕರ್ನಾಟಕ ವಿಧಾನ ಸಭೆಯಲ್ಲಿ ಭಾರತೀಯ ಜನತಾ ಶಾಸಕಾಂಗ ಪಕ್ಷದ ಸದಸ್ಯರಾಗಿರುತ್ತಾರೆ ಎಂದು ತಿಳಿಸಿರುತ್ತಾರೆ. ಇದರಿಂದಾಗಿ ವಿಧಾನಸಭೆಯಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರ ಸಂಖ್ಯೆ 44ಕ್ಕೆ ಏರಿಕೆಯಾಗಿದೆಯೆಂದು ಹಾಗೂ ವಿಲೀನಕ್ಕೆ ಅನುಮೋದನೆ ನೀಡಿ ಅಧಿಕೃತ ವಿರೋಧ ಪಕ್ಷವೆಂದು ಭಾರತೀಯ ಜನತಾ ಪಕ್ಷಕ್ಕೆ ಮಾನ್ಯತೆ ನೀಡಬೇಕೆಂದು ಕೋರಿರುತ್ತಾರೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ ಕರ್ನಾಟಕ ಜನತಾ ಶಾಸಕಾಂಗ ಪಕ್ಷದ 6 ಸದಸ್ಯರಲ್ಲಿ ಶ್ರೀಯುತರುಗಳಾದ (1) ಬಿ.ಎಸ್. ಯಡಿಯೂರಪ್ಪ, ಶಾಸಕರು (ಶಿಕಾರಿಪುರ ಕ್ಷೇತ್ರ, ಸಂಖ್ಯೆ:115) (2) ಶ್ರೀ ಯು.ಬಿ. ಬಣಕಾರ್, ಶಾಸಕರು (ಹಿರೇಕೆರೂರ ಕ್ಷೇತ್ರ, ಸಂಖ್ಯೆ 86) (3) ಡಾ॥ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್ ನಗರ ಕ್ಷೇತ್ರ, ಸಂಖ್ಯೆ 50) ಮತ್ತು ಡಾ॥ ವಿಶ್ವನಾಥ್ ಈ ಪಾಟೀಲ (ಬೈಲಹೊಂಗಲ ಕ್ಷೇತ್ರ, ಸಂಖ್ಯೆ:16) ಈ 4 ಸದಸ್ಯರು ಭಾರತೀಯ ಜನತಾ ಶಾಸಕಾಂಗ ಪಕ್ಷದಲ್ಲಿ ವಿಲೀನಗೊಳ್ಳಲು ಭಾರತ ಸಂವಿಧಾನದ ಅನೂಸೂಚಿ 10ರ ಪ್ಯಾರ4(2)ರಲ್ಲಿ ಉಪಬಂಧಿಸಲಾದಂತೆ ಮತ್ತು ಕರ್ನಾಟಕ ವಿಧಾನಸಭೆಯ (ಪಕ್ಷಾಂತರ ಆಧಾರದ ಮೇಲೆ ಸದಸ್ಯರ ಅನರ್ಹತೆ) ನಿಯಾಮಾವಳಿಗಳು 1986ರ ಮೇರೆಗೆ ಎಲ್ಲಾ ಷರತ್ತುಗಳನ್ನು ಪೂರೈಸಿರುವುದರಿಂದ ಅವರುಗಳನ್ನು ತಕ್ಷಣದಿಂದ

ಜಾರಿಗೆ ಬರುವಂತೆ ಭಾರತೀಯ ಜನತಾ ಪಕ್ಷದ ಶಾಸಕಾಂಗ ಸದಸ್ಯರಾಗಿರುತ್ತಾರೆಂದು ಪರಿಗಣಿಸಿ ಈ ಮೂಲಕ ಆದೇಶಿಸಿದ್ದೇನೆ.

ಇದನ್ನು ಸದನದ ಗಮನಕ್ಕೆ ತರಬಯಸುತ್ತೇನೆ.

ಅಧ್ಯಕ್ಷರು: ಈಗ ಸದನವನ್ನು ನಾಳೆ ಬೆಳಿಗ್ಗೆ 11–00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1 ಗಂಟೆ 15 ನಿಮಿಷಕ್ಕೆ ಮುಕ್ತಾಯಗೊಂಡು ದಿನಾಂಕ:23.01.2014 ರಂದು ಬೆಳಿಗ್ಗೆ 11 ಗಂಟೆಗೆ ಸಭೆ ಸೇರುವಂತೆ ನಿಶ್ಚಯಿಸಿತು)

ಅನುಬಂಧ–2

ಕಾರ್ಯದರ್ಶಿಯವರ ವರದಿ

ಹದಿನಾಲ್ಕನೇ ವಿಧಾನಸಭೆಗೆ ಸಂಬಂಧಪಟ್ಟಂತೆ

ರಾಷ್ಟ್ರಪತಿಯವರಿಂದ/ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆದಿರತಕ್ಕ ವಿಧೇಯಕಗಳ ಪಟ್ಟಿ

ಕ್ರಮ ಸಂಖ್ಯೆ	ವಿಧೇಯಕದ ಹೆಸರು	ಒಪ್ಪಿಗೆಯನ್ನು ಪಡೆದ ದಿನಾಕ	ಒಪ್ಪಿಗೆಯನ್ನು ನೀಡಿದವರು
1	ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ವಿಧೇಯಕ, 2013	26.12.2013	ರಾಜ್ಯಪಾಲರು
2	ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ವಿಧೇಯಕ, 2013	28.12.2013	ರಾಜ್ಯಪಾಲರು
3	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ,2013	31.12.2013	ರಾಜ್ಯಪಾಲರು
4	ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನ) ತಿದ್ದುಪಡಿ) ವಿಧೇಯಕ, 2013	28.12.2013	ರಾಜ್ಯಪಾಲರು
5	ಕರ್ನಾಟಕ ಧನವಿನಿಯೋಗ (ಸಂಖ್ಯೆ4) ವಿಧೇಯಕ, 2013	23.12.2013	ರಾಜ್ಯಪಾಲರು

ಪಿ.ಓಂಪ್ರಕಾಶ
ಕಾರ್ಯದರ್ಶಿ

ಕರ್ನಾಟಕ ವಿಧಾನ ಸಭೆ

ಗುರುವಾರ 23ನೇ ಜನವರಿ 2014 ರಂದು ಸದನವು

ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಗ್ಗೆ 11–10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : ಶ್ರೀ ಕಾಗೋಡು ತಿಮ್ಮಪ್ಪನವರು

ಪೀಠವನ್ನು ಅಲಂಕರಿಸಿದ್ದರು